# ವಿಶ್ವನಂದಿನಿ ಲೇಖನಮಾಲೆ – 94

## ಚಾತುರ್ಮಾಸ್ಯವ್ರತ ಎಂಬ ಪರಮಾತ್ಮನ ಕಾರುಣ್ಯ

ಶಾಸ್ತ್ರದ ಅಧ್ಯಯನ ಮಾಡುತ್ತ ಕುಳಿತಾಗ ಮೇಲಿಂದ ಮೇಲೆ ಮನವರಿಕೆಯಾಗುವ ತತ್ವ – ಶ್ರೀಹರಿಯ ಕಾರುಣ್ಯಕ್ಕೆ ಕೊನೆಯಿಲ್ಲ, ಪ್ರಪಂಚದಲ್ಲಿ ಅವನ ಕಾರುಣ್ಯದ ಕುರುಹುಗಳಿಗೂ ಕೊನೆಯಿಲ್ಲ ಎನ್ನುವದು.

ಸಂಸಾರದಲ್ಲಿ ಮುಳುಗಿ ಸಂತ್ರಸ್ತರಾದ ಜನರಿಗೆ ಅದೆಷ್ಟು ರೀತಿಯಲ್ಲಿ  ಉದ್ಧಾರದ ದಾರಿಯನ್ನು ಪರಮಾತ್ಮ ತೋರಿದ್ದಾನೆ ಎನ್ನುವದು ನಮ್ಮನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತದೆ.

ಚಾತುರ್ಮಾಸ್ಯ ವ್ರತ ಎನ್ನುವದು ಪರಮಾತ್ಮನ ಕಾರುಣ್ಯದ ಅದ್ಭುತವಾದ ಕುರುಹು. ಭವಸಾಗರದಿಂದ ನಮ್ಮನ್ನು ಉದ್ಧರಿಸುವ ಈ ಶ್ರೇಷ್ಠ ವ್ರತದ ಕುರಿತು ಸ್ವಯಂ ಪರಮಾತ್ಮನೇ ನಮಗೆ ತಿಳಿಸಿ ಹೇಳಿದ್ದಾನೆ.

ಭೂದೇವಿಯಲ್ಲಿ ನಿಂತು ತಾನೇ ಪ್ರಶ್ನೆ ಮಾಡಿ, ಯಜ್ಞವರಾಹನಾಗಿ ತಾನೇ ಉತ್ತರ ನೀಡಿ, ವೇದವ್ಯಾಸರೂಪದಿಂದ ಅದನ್ನು ತಾನೇ ಗ್ರಂಥದಲ್ಲಿ ಸೇರಿಸಿ, ಗುರುಗಳಲ್ಲಿ ನಿಂತು ಉಪದೇಶ ಮಾಡಿ,
ಮನಸ್ಸು ಬುದ್ಧಿಗಳಲ್ಲಿ ನಿಂತು ಆ ತತ್ವಗಳಲ್ಲಿ ವಿಶ್ವಾಸವನ್ನು ನೀಡಿ, ಅಂತರ್ಯಾಮಿಯಾಗಿ ನಮ್ಮಿಂದ ಆ ಕರ್ಮಗಳನ್ನು ಮಾಡಿಸಿ, ಇಷ್ಟೆಲ್ಲದರಿಂದ ತಾನೇ ಪ್ರೀತನಾಗಿ ಕಡೆಗೆ ಶ್ವೇತದ್ವೀಪದಲ್ಲಿ ಮಾಯಾದೇವಿಯ ಸಮೇತನಾಗಿ ಕುಳಿತು ನಮ್ಮನ್ನು ಪ್ರೀತಿಯ ನೋಟದಿಂದ ಹರಸಿ ಭವದ ಬಂಧವನ್ನು ಕಳೆಯುವ ಅವನ ಕಾರುಣ್ಯಕ್ಕೆ ಅನಂತ ನಮಸ್ಕಾರಗಳು. ಅನಂತಕಾಲದವರೆಗೆ ಅನಂತಾನಂತನಮಸ್ಕಾರಗಳು.

ಭೂಮಿಗೆ ಅಭಿಮಾನಿನಿಯಾದ ಭೂದೇವಿ ಒಮ್ಮೆ ವರಾಹದೇವರನ್ನು ಪ್ರಾರ್ಥನೆ ಮಾಡುತ್ತಾಳೆ —

### ಪ್ರಾಪ್ತೇ ಕಲಿಯುಗೇ ಘೋರೇ

**ಪ್ರಾಯಸ್ತ್ವತ್ತೋ ಬಹಿರ್ಮುಖಾಃ ।**
**ಭವಿಷ್ಯಂತಿ ಜನಾಃ ಸ್ವಾಮಿನ್**
**ಕೇಚಿದ್ ಭಕ್ತಾಸ್ತಥಾ ತ್ವಯಿ ।।**

**ಅಲ್ಪಾಯುಷೋಽಲ್ಪವಿತ್ತಾಶ್ಚ**
**ಮಂದಜ್ಞಾನಾಶ್ಚ ರೋಗಿಣಃ ।**
**ಸ್ವಕೀಯಾಚಾರಚರಣೇಽ-**
**ಪ್ಯಕ್ಷಮಾ ನೃಪದಸ್ಯುಭಿಃ ।**
**ಉಪದ್ರುತಾಸ್ತರಿಷ್ಯಂತಿ**
**ಕಥಮೇತದ್ ವದಸ್ವ ಮಾಮ್ ।।**

**ಅಲ್ಪಾಽಪಿ ಯಾ ಕೃತಾ ಪೂಜಾ**
**ತದ್ವ್ರತಾಚರಣಾದಿಕಮ್ ।**
**ಬಹುಃ ಸ್ಯಾದಲ್ಪಮಪಿ ತಂ**
**ಕಾಲಂ ಚಾಽಖ್ಯಾಹಿ ತತ್ತ್ವತಃ।।**

ಸ್ವಾಮಿ, ಕಲಿಯುಗದಲ್ಲಿ ನಿನ್ನ ಕುರಿತು ವಿಚಾರ ಮಾಡದ ಜನರೇ ಅಧಿಕ. ಆದರೆ ಅಲ್ಲಲ್ಲಿ ನಿನ್ನಲ್ಲಿ ಭಕ್ತಿಯುಳ್ಳ ಜನರೂ ಇರುತ್ತಾರೆ. ಆದರೆ, ಕಲಿಯುಗದ ಪ್ರಭಾವದಿಂದ, ಅವರ ಆಯುಷ್ಯ ಅಲ್ಪ, ಅವರ ಬಳಿ ಇರುವ ಸಂಪತ್ತು ಅಲ್ಪ,

ಅವರದು ಮಂದಜ್ಞಾನ, ಅನೇಕ ರೋಗಗಳು, ತಮ್ಮ ವರ್ಣಾಶ್ರಮದ ಧರ್ಮಗಳನ್ನು ಆಚರಿಸಲೂ ಸಾಧ್ಯವಿಲ್ಲದಂತಾಗಿರುತ್ತದೆ ಆ ಜನರಿಗೆ, ಕಳ್ಳರಿಂದ, ರಾಜರಿಂದ, ಕಳ್ಳರಾದ ರಾಜರಿಂದ ವಿವಿಧ ತೊಂದರೆಗೊಳಗಾಗಿರುತ್ತಾರೆ.

ಇಂಥ ಭಕ್ತರು ಈ ಸಮಸ್ಯೆಗಳನ್ನು ಹೇಗೆ ದಾಟಬಹುದು ಎನ್ನುವ ಉಪಾಯಗಳನ್ನು ನನಗೆ ತಿಳಿಸು. ಸ್ವಲ್ಪವೇ ಸಾಧನೆಯಿಂದ ನಿನ್ನ ಭೂರಿ ಅನುಗ್ರಹವನ್ನು ಪಡೆಯುವ ಬಗೆಯಿದ್ದರೆ ತಿಳಿಸು. ಅಂಥಹ ಸಾಧನೆಯ ವ್ರತವನ್ನು ಯಾವಾಗ ಮಾಡಬೇಕು ಎನ್ನುವದನ್ನೂ ತಿಳಿಸು.

ಭೂದೇವಿಯ ಪ್ರಾರ್ಥನೆಗೆ ಶ್ರೀವರಾಹದೇವರು ಉತ್ತರ ನೀಡುತ್ತಾರೆ —

**ಸಂಸಾರೇ ಕ್ಲಿಶ್ಯಮಾನಾನಾಂ**
**ಜನಾನಾಮುಜ್ಜಿಹೀರ್ಷಯಾ ।**
**ಯತ್ ತ್ವಂ ಪೃಷ್ಟವತೀ ತತ್ ತೇ**
**ತತ್ವತಃ ಕಥಯಾಮ್ಯಹಮ್ ।।**

**ಅಸ್ತಿ ಪ್ರಿಯತಮಃ ಕಾಲಃ**

ಚಾತುರ್ಮಾಸ್ಯಾಭಿಧೋ ಮಮ ।
ದಾನಂ ವ್ರತಂ ಜಪೋ ಹೋಮಃ
ತತ್ರಾನಂತಗುಣಂ ಸ್ಮೃತಮ್ ।।

ಮಾಸೇಷ್ವನ್ಯೇಷು ಯತ್ ಕಿಂಚಿತ್
ಕ್ರಿಯತೇ ಮಮ ತೋಷಣಮ್ ।
ತಸ್ಮಾತ್ ಕೋಟಿಗುಣಂ ಪುಣ್ಯಂ
ಮಾಘೇ ಮಕರಗೇ ರವೌ ।।

ತತೋಽಪಿ ಕೋಟಿಗುಣಿತಂ
ವೈಶಾಖೇ ಮಾಸಿ ಲಕ್ಷ್ಯತೇ ।
ತತೋಽಪ್ಯನಂತಗುಣಿತಂ
ಚಾತುರ್ಮಾಸ್ಯೇ ನ ಸಂಶಯಃ।।

ಅಲ್ಪಾಯುಷೋಽಲ್ಪವಿತ್ತಾ ವಾ
ಮಂದಜ್ಞಾನಾ ರೋಗಿಣೋಽಪಿ ವಾ ।
ಸ್ವಕೀಯಾಚಾರರಹಿತಾಃ
ಸ್ವಶಕ್ತ್ಯಾ ಯತ್ ಪ್ರಕುರ್ವತೇ ।
ಮುಚ್ಯಂತೇ ತತ ಏವೈತೇ
ದುಸ್ತರಾದ್ ಭವಸಾಗರಾತ್ ॥

ಅವನ ಕಾರುಣ್ಯದ ಈ ನುಡಿಗಳ ಅರ್ಥ ಹೀಗಿದೆ—

ಭೂಮಿ, ಸಂಸಾರದಲ್ಲಿ ಬಳಲುತ್ತಿರುವ ಸಜ್ಜನರ ಉದ್ಧಾರಕ್ಕಾಗಿ ನೀನೇನು ಪ್ರಶ್ನೆ ಮಾಡಿದ್ದೆ, ಅದಕ್ಕೆ ಉತ್ತರವನ್ನು ನೀಡುತ್ತೇನೆ, ಕೇಳು.

ಹನ್ನೆರಡು ತಿಂಗಳುಗಳಲ್ಲಿಯೇ ನನಗೆ ಅತ್ಯಂತ ಪ್ರಿಯತಮವಾದ ಕಾಲ ಚಾತುರ್ಮಾಸ್ಯದ ಕಾಲ. ಆ ನಾಲ್ಕುತಿಂಗಳಲ್ಲಿ ಮಾಡುವ ದಾನ, ವ್ರತ, ಜಪ, ಹೋಮ ಎಲ್ಲವೂ ಅನಂತಪಟ್ಟು ಫಲವನ್ನು ನೀಡುತ್ತವೆ.

ಬೇರೆಯ ಮಾಸಗಳಲ್ಲಿ ಮಾಡುವ ಸತ್ಕರ್ಮಗಳಿಗಿಂತ ಮಾಘಮಾಸದಲ್ಲಿ ಮಾಡುವ ಅದೇ ಸತ್ಕರ್ಮಗಳು ಕೋಟಿಪಟ್ಟು ಹೆಚ್ಚಿನ ಫಲವನ್ನು ನೀಡುತ್ತವೆ.

ಮಾಘಮಾಸದಲ್ಲಿ ಮಾಡುವ ಸತ್ಕರ್ಮಗಳು ನೀಡುವ ಫಲದ ಕೋಟಿಪಟ್ಟು ಫಲವನ್ನು ವೈಶಾಖ ಮಾಸದಲ್ಲಿ ಮಾಡುವ ಸತ್ಕರ್ಮಗಳು ನೀಡುತ್ತವೆ.

ವೈಶಾಖಮಾಸದಲ್ಲಿ ಮಾಡುವ ಸತ್ಕರ್ಮಗಳ ಫಲದ ಅನಂತಪಟ್ಟು ಫಲ  ಚಾತುರ್ಮಾಸ್ಯದ ಕಾಲದಲ್ಲಿ ಮಾಡುವ ಸತ್ಕರ್ಮಗಳಿಗೆ ದೊರೆಯುತ್ತವೆ.

(ಇಲ್ಲಿ ತಾರತಮ್ಯವನ್ನು ಸರಿಯಾಗಿ ತಿಳಿಯತಕ್ಕದ್ದು.  ಅಧಿಕಮಾಸ ಹನ್ನೆರಡು ಮಾಸಗಳಿಗಿಂತಲೂ ಅಧಿಕವಾದದ್ದು. ಅಧಿಕಮಾಸದಲ್ಲಿ ಮಾಡುವ ಸತ್ಕರ್ಮಗಳು ಸರ್ವಸರ್ವೋತ್ತಮಫಲವನ್ನು ನೀಡುತ್ತವೆ. ಆ ನಂತರ ಚಾತುರ್ಮಾಸ್ಯ. ಆ ನಂತರ ಮಾರ್ಗಶೀರ್ಷ. ಆ ನಂತರ ವೈಶಾಖ. ಆ ನಂತರ ಮಾಘಮಾಸ. ಆ ನಂತರ ಕಾರ್ತೀಕ ಮಾಸ. ಆ ನಂತರ ಉಳಿದ ಮಾಸಗಳು.)

ಅಲ್ಪಾಯುಷ್ಯದಿಂದ ಧರ್ಮದ ಆಚರಣೆ ಮಾಡುವ ಸಮಯವನ್ನೇ ಕಳೆದುಕೊಂಡ, ಸಾಧನೆಗೆ ಯೋಗ್ಯವಾದ ಸಂಪತ್ತಿಲ್ಲದೇ ದರಿದ್ರರಾದ, ಮಂದವಾದ ಬುದ್ಧಿ ಜ್ಞಾನವುಳ್ಳ, ರೋಗಾದಿಗಳಿಂದ ತೊಂದರೆಗೊಳಗಾದವರು ತಮಗೆಷ್ಟು ಸಮಯ, ಸಂಪತ್ತು, ಬುದ್ಧಿ,

ಜ್ಞಾನವಿದೆಯೋ ಅಷ್ಟರಿಂದಲೇ ಭಕ್ತಿಯಿಂದ ಈ ಚಾತುರ್ಮಾಸ್ಯವ್ರತವನ್ನು ಮಾಡುತ್ತಾರೆಯೋ ಅವರು ಈ ಸಂಸಾರವನ್ನು ದಾಟುತ್ತಾರೆ.

ಈ ಶ್ಲೋಕಗಳ ವಿಸ್ತಾರ ಅದ್ಭುತವಾಗಿದೆ. ನಾವು ಹತ್ತಾರು ಕಾರಣಗಳನ್ನು ನೀಡಿ ಧರ್ಮಾಚರಣೆ ಮಾಡಲು ಸಾಧ್ಯವಿಲ್ಲ ಎಂದು ಹೇಳುತ್ತಿರುತ್ತೇವೆ. ಆ ಕಾರಣಗಳು ಸರಿಯಾಗಿಯೂ ಇರುತ್ತವೆ. ಆದರೆ, ಕಾರಣಗಳನ್ನು ಹೇಳಿ ಸಾಧನೆ ಮಾಡಲು ಸಾಧ್ಯವಿಲ್ಲವೆಂದ ಮಾತ್ರಕ್ಕೆ ನಮಗೆ ಮುಕ್ತಿ ದೊರೆಯುವದಿಲ್ಲ ತಾನೇ?

ಹೀಗಾಗಿ, ನಾವು ನಮ್ಮ ಸಾಧನೆಗೆ ಪ್ರತಿಬಂಧಕವಾದ ಪಾಪಗಳನ್ನು ನಾಶ ಮಾಡಿಕೊಳ್ಳಲು ಮೊದಲಿಗೆ ಪ್ರಯತ್ನಿಸಬೇಕು. ನೀವು ನೋಡಿ, ಹುಟ್ಟಿದಾರಭ್ಯ ಏಕಾದಶಿಯನ್ನು ಮಾಡಿರುವದಿಲ್ಲ. ಆದರೆ ಏಕಾದಶಿಯಂದು ಉಂಡರೆ ಉಂಟಾಗುವ ಪಾಪದ ಅರಿವು ಮೂಡಿದಾಗ ನೀವು ಏಕಾದಶಿಯನ್ನು ಮಾಡಲು ಆರಂಭಿಸಿರುತ್ತೀರಿ. ಒಂದಷ್ಟು ಏಕಾದಶಿಗಳು ನಡೆಯುತ್ತವೆ. ಆದರೆ, ಆ ನಂತರ ಅತೀ ದೊಡ್ಡ

ಖಾಯಿಲೆಯೊಂದು ಅಮರಿಕೊಳ್ಳುತ್ತದೆ. ನೀವು ತಿನ್ನಲೇಬೇಕಾದ ಪರಿಸ್ಥಿತಿ ಮೂಡಿರುತ್ತದೆ.

ಹಾಗೆಯೇ, ದೇವರ ಪೂಜೆ ಮಾಡಬೇಕು, ಸಂಧ್ಯಾವಂದನೆ ಮಾಡಬೇಕು, ತೀರ್ಥಯಾತ್ರೆ ಮಾಡಬೇಕು ಎಂದೆಲ್ಲ ಸಂಕಲ್ಪ ಮಾಡಿರುತ್ತೀರಿ. ಅದಕ್ಕಾಗಿ ಒಂದಷ್ಟು ಪ್ರಯತ್ನವನ್ನೂ ಪಟ್ಟಿರುತ್ತೀರಿ. ಆದರೆ ದೇವರಪೂಜೆಗೆ ನೀರೇ ದೊರೆಯುವದಿಲ್ಲ. ನೀರು ದೂರ ಉಳಿಯಿತು, ತುಳಸಿ ಸಹಿತ ದೊರೆಯದ ಅವಸ್ಥೆಗೆ ಇವತ್ತಿನ ಪಟ್ಟಣದ ಮಂದಿ ಮುಟ್ಟಿದ್ದಾರೆ. ತೀರ್ಥಯಾತ್ರೆಗೆ ಹೋದರೂ ಅಲ್ಲಿ ಧರ್ಮಾಚರಣೆಗಿಂತ ಪಾಪಸಂಪಾದನೆಯೇ ಹೆಚ್ಚು.

ಇನ್ನು ಇವಿಷ್ಟರ ಜೊತೆಯಲ್ಲಿ ಇವತ್ತಿನ ಘೋರಸಮಾಜದ, ಹುಚ್ಚು ಸರಕಾರಗಳ ಭಯ. ಭೂದೇವಿ ಹೇಳಿದಂತೆ, ‘ನೃಪದಸ್ಯುಭಿಃ ಉಪದ್ರುತಾಃ’ ಕಳ್ಳರಂತಿರುವ ರಾಜರಿಂದ ನಮಗೆ ತೊಂದರೆ.

ಇಷ್ಟೆಲ್ಲದರ ಮಧ್ಯದಲ್ಲಿ ಸಾಧನೆಯಾಗಲಿಕ್ಕೆ, ವಿಘ್ನವಿಲ್ಲದಂತೆ ಸಾಧನೆ ನಡೆಯಲಿಕ್ಕೆ ಏನು

ಮಾಡಬೇಕು. **ವರಾಹದೇವರು ಉತ್ತರ ನೀಡಿದ್ದಾರೆ — ಚಾತುರ್ಮಾಸ್ಯವ್ರತವನ್ನು ಮಾಡಿ. ಆ ವ್ರತದ ಆಚರಣೆಯಿಂದ ನಮ್ಮ ಸಾಧನೆಗಳ ವಿಘ್ನಗಳು ದೂರಾಗುತ್ತವೆ.**

ಅದೆಂಥ ರೋಗವಿದ್ದರೂ, ಅದೆಂಥ ಪರಿಸ್ಥಿತಿಯಿದ್ದರೂ ಚಾತುರ್ಮಾಸ್ಯ ವ್ರತವನ್ನು ಬಿಡಬೇಡಿ. ಅದು ನಾಲಿಗೆಯ ಮೇಲೆ ನಿಯಂತ್ರಣವನ್ನು ತಂದೀಯುತ್ತದೆ. ಅದು ಶ್ರೀಕೃಷ್ಣನಲ್ಲಿ ಭಕ್ತಿಯನ್ನು ಮೂಡಿಸುತ್ತದೆ. ಅದು ಸಂಸಾರದಲ್ಲಿ ವೈರಾಗ್ಯವನ್ನು ಮೂಡಿಸುತ್ತದೆ. ಅದು ನಮಗೆ ಪರಿಶುದ್ಧ ಜ್ಞಾನವನ್ನು ಕರುಣಿಸುತ್ತದೆ.

ಚಾತುರ್ಮಾಸ್ಯವನ್ನು ಸರಿಯಾದ ಸಮಯಕ್ಕೆ ಆರಂಭ ಮಾಡಿಲ್ಲ, ಈಗ ಚಾತುರ್ಮಾಸ್ಯ ನಡೆಯುತ್ತಿದೆ ಎಂದಾದಲಲ್ಲಿ, ಇಂದಿನಿಂದಾದರೂ ಆರಂಭ ಮಾಡಿ. ತಪ್ಪಿಲ್ಲ. ಏಕೆಂದರೆ ಮುಂದಿನ ವರ್ಷದವರೆಗೆ ಬದುಕಿರುತ್ತೇವೆ ಎಂಬ ನಿಶ್ಚಯವಿಲ್ಲ. ಬದುಕಿರುವಷ್ಟು ದಿವಸದಲ್ಲಿ ಪರಮಾತ್ಮನಿಗೆ

ಪ್ರಿಯತಮವಾದ, ವೈರಾಗ್ಯಪ್ರದವಾದ ಈ ವ್ರತವನ್ನು ಆಚರಿಸಲೇ ಬೇಕು.

ನಮ್ಮ ಸಾಧನೆಗೆ ಪ್ರತಿಬಂಧಕವಾದ ಪಾಪವನ್ನು ಕಳೆದು ನಮ್ಮನ್ನು ಭವಸಾಗರದಿಂದ ಉದ್ಧರಿಸುವ ವ್ರತ ಇದು ಎಂದು ಸ್ವಯಂ ನಮ್ಮ ಸ್ವಾಮಿಯೇ ಹೇಳಿದ್ದಾನೆ. ಇದನ್ನೂ ನಾವು ಮಾಡಲಿಲ್ಲ ಎಂತಾದಲ್ಲಿ ನಮ್ಮ ಉದ್ಧಾರದ ದಾರಿ ಮುಚ್ಚಿದೆಯೆಂದೇ ಅರ್ಥ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**ಶಾಕವ್ರತದ ಕುರಿತ ವಿವರಣೆ VNA101 ಲೇಖನದಲ್ಲಿದೆ.**

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India
nagendracharya@yahoo.co.in
WhatsApp: 9901 551 491